KARNATAK UNIVERSITY, DHARWAD
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

Examination G.A.D. Section
ಪರೀಕ್ಷಾ ಸಾಮಾನ್ಯ ಆಡಳಿತ ವಿಭಾಗ

"NAAC Accredited with "A" Grade 2022"

Pavate Nagar, Dharwad
ಪಾವಟೆನಗರ, ಧಾರವಾಡ

Tel Ph No. 0836-2215267
Website : www.kud.ac.in

ಕವಿವಿ/ಪರೀಕ್ಷಾ/ಜಿಎಡಿ/300726/2026/580 ದಿನಾಂಕ: 30/07/2026

# ಸುತ್ತೋಲೆ

**ವಿಷಯ:** ಸ್ನಾತಕ ಪದವಿಗಳ (NEP/R-NEP) 2, 4, 6 & 8 ನೇ ಸೆಮಿಸ್ಟರ್‌ನ ಪರೀಕ್ಷೆಗಳ ಅವಧಿಯಲ್ಲಿ ಎನ್.ಸಿ.ಸಿ. ಕ್ಯಾಂಪ್‌ಗಳಲ್ಲಿ ಭಾಗವಹಿಸಿದ ಕೆಡೆಟ್‌ಗಳಿಗೆ ಪ್ರತ್ಯೇಕ ಸೆಮೆಸ್ಟರ ಪರೀಕ್ಷೆ ಬರೆಯಲು ಅವಕಾಶ ನೀಡುವ ಕುರಿತು.

**ಉಲ್ಲೇಖ:** 1) ಕರ್ನಾಟಕ ಸರ್ಕಾರ ಪತ್ರ ನಂ: ಇಡಿ/37/ರಾಮಸೇ/2018 ದಿನಾಂಕ:27–06–2018.
2) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 30/07/2026

****@****

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂದಿಸಿದಂತೆ ಕ.ವಿ.ವಿ. ವ್ಯಾಪ್ತಿಯಲ್ಲಿ ಬರುವ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ಸ್ನಾತಕ ಪದವಿಗಳ (NEP/R-NEP) 2, 4, 6 & 8 ನೇ ಸೆಮಿಸ್ಟರ್‌ನ ಪರೀಕ್ಷೆಗಳು ದಿನಾಂಕ:10/06/2026 ರಿಂದ 07/07/2026 ರ ವರೆಗೆ ಜರುಗಿದ್ದು, ಈ ಪರೀಕ್ಷಾ ಅವಧಿಯಲ್ಲಿ ತಮ್ಮ ಮಹಾವಿದ್ಯಾಲಯಗಳಲ್ಲಿ ಓದುತ್ತಿರುವ ಎನ್.ಸಿ.ಸಿ ಕೆಡೆಟ್‌ಗಳು ರಾಷ್ಟ್ರಮಟ್ಟದ ಆರ್.ಡಿ.ಸಿ, ಎಐಟಿಎಸ್‌ಸಿ, ಎಐವಿಎಸ್‌ಸಿ, ಎಐಎನ್‌ಎಸ್‌ಸಿ ಮತ್ತಿತರ ಶಿಬಿರಗಳಲ್ಲಿ ಭಾಗವಹಿಸಿದ್ದಲ್ಲಿ ಜೂನ್ 2026 ರ ಪರೀಕ್ಷಾ ದಿನಗಳಂದು ಶಿಬಿರಗಳಲ್ಲಿ ಭಾಗವಹಿಸಿದ ಬಗ್ಗೆ ಧೃಡೀಕೃತ ಪ್ರಮಾಣಪತ್ರ ನೀಡಿದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಮಾತ್ರ ನಂತರ ಪರೀಕ್ಷೆ ನಡೆಸಲು ಕ್ರಮ ಕೈಗೊಳ್ಳಲಾಗುವುದು.

ಆದುದರಿಂದ ವಿದ್ಯಾರ್ಥಿಗಳು ಮೇಲ್ಕಂಡ ಪರೀಕ್ಷಾ ದಿನಗಳಂದು ಎನ್.ಸಿ.ಸಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಬಗ್ಗೆ ದೃಢೀಕೃತ ಪ್ರಮಾಣ ಪತ್ರ (Attendance Certificate) ವನ್ನು ವಿದ್ಯಾರ್ಥಿಯ ಹಾಲ್ ಟಿಕೇಟ್‌ನ Xerox ಪ್ರತಿಯೊಂದಿಗೆ ದಿನಾಂಕ:04/08/2026 ರ ಒಳಗಾಗಿ ಮಹಾವಿದ್ಯಾಲಯದ ಪ್ರಾಚಾರ್ಯರು ಸಲ್ಲಿಸಲು ಸೂಚಿಸಲಾಗಿದೆ. ಸದರಿ ಮಾಹಿತಿಯನ್ನು ತಮ್ಮ ಮಹಾವಿದ್ಯಾಲಯಗಳಲ್ಲಿ ಓದುತ್ತಿರುವ ಸಂಬಂಧಿತ ವಿದ್ಯಾರ್ಥಿಗಳ ಗಮನಕ್ಕೆ ತರುವುದು.

30/07/2026
ಕುಲಸಚಿವರು(ಮೌಲ್ಯಮಾಪನ)

ಗೆ,
ಕವಿವಿ ವ್ಯಾಪ್ತಿಯ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ

**ಪ್ರತಿಗಳು: ಮಾಹಿತಿಗಾಗಿ:**

1) ಸಿಸ್ಟಮ್ ಎನಾಲಿಸ್ಟ್, ಪರೀಕ್ಷಾ ಗಣಕಯಂತ್ರ ವಿಭಾಗ ಕ.ವಿ.ವಿ ಧಾರವಾಡ.
2) ನಿರ್ದೇಶಕರು ಮಾಹಿತಿ ತಂತ್ರಜ್ಞಾನ ವಿಭಾಗ ಕ.ವಿ.ವಿ ಧಾರವಾಡ. (ಸುತ್ತೋಲೆಯನ್ನು ಅಂತರ್ಜಾಲದಲ್ಲಿ ಪ್ರಕಟಿಸುವುದು)
3) ಉಪ ಕುಲಸಚಿವರು/ಸಹಾಯಕ ಕುಲಸಚಿವರು ವಿದ್ಯಾಮಂಡಳ/ಪರೀಕ್ಷಾ/ಹಣಕಾಸು ವಿಭಾಗ ಕ.ವಿ.ವಿ ಧಾರವಾಡ.
4) ಮಾನ್ಯ ಕುಲಪತಿಗಳು/ಕುಲಸಚಿವರು/ಕುಲಸಚಿವರು(ಮೌಲ್ಯಮಾಪನ)/ವಿತ್ತಾಧಿಕಾರಿಗಳ ಆಪ್ತಕಾರ್ಯದರ್ಶಿಗಳು ಕ.ವಿ.ವಿ ಧಾರವಾಡ.
5) ಎಲ್ಲ ಅಧೀಕ್ಷಕರು ಪರೀಕ್ಷಾ ವಿಭಾಗ ಕ.ವಿ.ವಿ.ಧಾರವಾಡ.